5) ಪೊಲೀಸ್, ಕಂದಾಯ ಮತ್ತು ಅರಣ್ಯ ಇಲಾಖೆಯ ಅಧಿಕಾರಿಗಳು ನಕ್ಸಲ್ ಪೀಡಿತ ಪ್ರದೇಶದಲ್ಲಿ ಸಾರ್ವಜನಿಕ ಸಂಪರ್ಕ ಕಾರ್ಯಕ್ರಮಗಳನ್ನು ನಡೆಸುವರು.

6) ಕುದುರೆಮುಖ ಪ್ರದೇಶದಲ್ಲಿನ ಗುಡ್ಡಗಾಡು ಜನಗಳ ಸಮಸ್ಯೆಗಳನ್ನು ಅಭ್ಯಸಿಸಲು ಹಾಗೂ ಅದನ್ನು ಪರಿಹಾರ ಮಾಡಲು ಸೂಕ್ತ ಅಭಿವೃದ್ಧಿ/ಪುನರ್ವಸತಿ ಕಾರ್ಯಗಳನ್ನು ಸಲಹೆ ಮಾಡಲು ಉನ್ನತ ಮಟ್ಟದ ಸಮಿತಿಗಳನ್ನು ರಚಿಸಲಾಗಿರುತ್ತದೆ.

ಇ)ಒಬ್ಬರನ್ನು ಬಂಧಿಸಲಾಗಿದೆ, 52 ನಕ್ಸಲೀಯರು ತಲೆಮರೆಸಿಕೊಂಡಿರುತ್ತಾರೆ, ನಕ್ಸಲೀಯರ ತಂಡಗಳು ಮಲೆನಾಡಿನ ಅರಣ್ಯ ಪ್ರದೇಶಗಳಲ್ಲಿ 2 ತಂಡಗಳಲ್ಲಿ ಬೀಡುಬಿಟ್ಟಿವೆ.

ಈ) ಒಬ್ಬ ಮಹಿಳೆ ಮೃತಪಟ್ಟಿರುತ್ತಾರೆ.

ಉ) ಪರಿಶೀಲಿಸಲಾಗುವುದು.

ಊ) ಪರಿಶೀಲಿಸಲಾಗುವುದು.

373 (147) ಶ್ರೀ ಸುನೀಲ್‌ಕುಮಾರ್ ವಿ. (ಕಾರ್ಕಳ): ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಈ ಹಿಂದೆ ಜಿಲ್ಲಾ ಕೇಂದ್ರದಿಂದ 20ಕಿ.ಮೀ. ವ್ಯಾಪ್ತಿಯಲ್ಲಿ ಖಾಸಗೀ ಬಸ್‌ಗಳ ಸೇವೆಗೆ ಅವಕಾಶ ಕಲ್ಪಿಸುವ ಸ್ಟೇಜ್ ಕ್ಯಾರಿಯೇಜ್ ಪದ್ಧತಿ ಜಾರಿಯಲ್ಲಿತ್ತೆ?

ಆ) ಈ ಪದ್ಧತಿಯನ್ನು ಈ ಸರ್ಕಾರ ರದ್ದು ಪಡಿಸಲು ನಿರ್ಧರಿಸುವುದು ನಿಜವೇ?

ಇ) ಇದಕ್ಕೆ ಕಾರಣಗಳೇನು?

ಈ) ಇದರಿಂದಾಗಿ ಸಾರಿಗೆ ಸಂಸ್ಥೆಯ ಆದಾಯಕ್ಕೆ ಕತ್ತರಿ ಬೀಳುವ ಭಯವಿದೆಯೇ?

ಉ) ಇದನ್ನು ತಾತ್ಕಾಲಿಕ ಸ್ಥಗಿತಗೊಳಿಸಿರುವುದು ನಿಜವೇ?

ಊ) ಈ ನಿಟ್ಟಿನಲ್ಲಿ ಬೇಂದ್ರೆ ನಗರ ಸಾರಿಗೆ ಸಂಸ್ಥೆಗೆ ಅನುಮತಿ ನೀಡಿರುವುದರ ಬಗ್ಗೆ ಸರ್ಕಾರದ ನಿಲುವೇನು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು):

ಅ) ಹೌದು.

ಆ) ಪರಿಶೀಲನೆಯಲ್ಲಿದೆ.

ಇ) ಉದ್ಭವಿಸುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ಉ) ಹೌದು.

ಊ) ಕಾನೂನು ರೀತಿ ಕ್ರಮ ವಹಿಸಲು ಸರ್ಕಾರ ಬದ್ಧವಾಗಿದೆ.

374 (404) ಶ್ರೀ ಸುನೀಲ್ ಕುಮಾರ್ ವಿ. (ಕಾರ್ಕಳ): ಮಾನ್ಯ ಉಪಮುಖ್ಯಮಂತ್ರಿಯವರು ಹಾಗೂ ಹಣಕಾಸು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಾನವ ಸಂಪನ್ಮೂಲ ಅಂಕಿ-ಅಂಶದ ಹೆಸರಿನಲ್ಲಿ ರಾಜ್ಯ ಸರ್ಕಾರಿ ನೌಕರರ ಕುರಿತು ಸಮಗ್ರವಾದ ವಿವರಗಳನ್ನು ಪಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ

ಆ) ಬಂದಿದ್ದಲ್ಲಿ ಸರ್ಕಾರಿ ನೌಕರರ ಮಾಹಿತಿ ಸಂಗ್ರಹದ ಉದ್ದೇಶಗಳೇನು;

ಇ) ಇದು ರಾಜ್ಯ ಸರ್ಕಾರಿ ನೌಕರರ ಆತಂಕಕ್ಕೆ ಕಾರಣವಾಗಿರುವುದು ನಿಜವೇ;

ಈ) ಇದಕ್ಕಾಗಿ ಪ್ರತ್ಯೇಕ ಮಸೂದೆಯನ್ನು ಜಾರಿ ಮಾಡಲಾಗಿದೆಯೇ

ಉ) ಯಾವಾಗ ಮಾಡಲಾಯಿತು;

ಊ) ಈ ಎಲ್ಲಾ ಪ್ರಶ್ನಾವಳಿಗಳನ್ನು ಸಂಗ್ರಹಿಸಿ ಕಡ್ಡಾಯ ನಿವೃತ್ತಿ ಅಥವಾ ವಿ.ಆರ್.ಎಸ್ ಕಡ್ಡಾಯ ನಿವೃತ್ತಿ ಅಥವಾ ವಿ.ಆರ್.ಎಸ್. ಯೋಜನೆಯನ್ನು ಜಾರಿಗೆ ತರಲು ಸರ್ಕಾರ ಉದ್ದೇಶಿಸಿದೆಯೇ?

ಶ್ರೀ ಸಿದ್ದರಾಮಯ್ಯ (ಉಪಮುಖ್ಯಮಂತ್ರಿಯವರು ಹಾಗೂ ಹಣಕಾಸು ಸಚಿವರು):

ಅ) ಹೌದು.

ಆ) ಮಾನವ ಸಂಪನ್ಮೂಲ ನಿರ್ವಹಣೆಯ ಕಾರ್ಯವನ್ನು ದಕ್ಷತೆಯಿಂದ ನಿರ್ವಹಿಸುವುದು ಅವಶ್ಯಕತೆಯಾಗಿದ್ದು ಇದಕ್ಕಾಗಿ ಎಲ್ಲಾ ಸರ್ಕಾರಿ ಇಲಾಖೆಗಳಿಗೂ ಹಾಗೂ ಇತರೆ ಭಾಗಗಳಿಗೆ ಸಾಮಾನ್ಯವಾಗಿ ಅನ್ವಯಿಸುವಂತಹ ಮಾನವ ಸಂಪನ್ಮೂಲ ಮಾಹಿತಿಯನ್ನು ಕಲೆ ಹಾಕಲಾಗುತ್ತಿದೆ. ಉತ್ತಮ ಆರ್ಥಿಕ ನಿರ್ವಹಣೆಗಾಗಿ, ಸಂಬಳ ಸಂಬಂಧ ಪಟ್ಟ ವಚ್ಚೆಗಳನ್ನು ಅಂದಾಜಿಸಲು ಆಡಳಿತಗಾರರಿಗೆ ನೆರವಾಗುವುದಲ್ಲದೆ, ಕರ್ನಾಟಕ ಸರ್ಕಾರದಲ್ಲಿ ಮಾನವ ಸಂಪನ್ಮೂಲ ಅಭಿವೃದ್ಧಿಯನ್ನು ಸುಧಾರಿಸಲು ಮತ್ತು ಸರ್ಕಾರದ ಎಲ್ಲಾ ನೌಕರರ ನಿಖರವಾದ ಮತ್ತು ಕಾರ್ಯೋಜಿತ ವೇತನ ವಿವರಗಳನ್ನು ಪಡೆಯಲು, ಸರ್ಕಾರದಲ್ಲಿ ಉತ್ಪಾದಕತೆ ಮತ್ತು ದಕ್ಷತೆಯನ್ನು ಸುಧಾರಿಸುವ ಅವಶ್ಯಕತೆಯನ್ನು ಮನಗಂಡು ಮಾನವ ಸಂಪನ್ಮೂಲ ನಿರ್ವಹಣೆ ಮಾಹಿತಿಯನ್ನು ಸಂಗ್ರಹಿಸಲಾಗುತ್ತಿದೆ.

ಇ) ಇಲ್ಲ.

ಈ) ಇಲ್ಲ.

ಉ) ಉದ್ಭವಿಸುವುದಿಲ್ಲ.

ಊ) ಇಲ್ಲ.

375 (405) ಶ್ರೀ ಸುನೀಲ್ ಕುಮಾರ್ ವಿ. (ಕಾರ್ಕಳ): ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರಾವಳಿ ಮೀನುಗಾರರ ಸಮಸ್ಯೆ – ಬೇಡಿಕೆಗಳ ನಿವಾರಣೆಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಆ) ಭಾರತೀಯ ಕಡಲುಗಳಲ್ಲಿ ವಿದೇಶಿ ಮೀನುಗಾರಿಕಾ ಕಂಪನಿಗಳಿಗೆ ಮುಕ್ತ ಅವಕಾಶವನ್ನು ಸರ್ಕಾರ ಕಲ್ಪಿಸಿದೆಯೆ;

ಇ) ಇದರಿಂದಾಗಿ ಸ್ಥಳೀಯ ಮೀನುಗಾರರಿಗೆ ತೊಂದರೆಯಾಗುವುದೆಂದು ಸರ್ಕಾರ ಭಾವಿಸುವುದಿಲ್ಲವೇ;

ಈ) ಬದುಕಿಗಾಗಿ ಮೀನುಗಾರರು ಹೋರಾಟ ನಡೆಸುತ್ತಿರುವ ಈ ಸಂದರ್ಭದಲ್ಲಿ ಅವರಿಗೆ ಸರ್ಕಾರದ ನೆರವೇನು;

ಉ) ಅಲ್ಲದೇ ಅಳ ಸಮುದ್ರದ ಅಕ್ರಮ ವಿದೇಶಿ ಮೀನುಗಾರಿಕೆ ನಿಷೇಧಿಸಲು ಸರ್ಕಾರ ಮುಂದಾಗಿಲ್ಲದಿರಲು ಕಾರಣವೇನು?